(iii) ತುಂಗಭದ್ರಾ ಸಕ್ಕರೆ (ದೇವಿ ಸಕ್ಕರೆ) ನಿಯಮಿತ (ಉದ್ಯಮದ ಆರ್ಜನೆ ಮತ್ತು ವರ್ಗಾವಣೆ) (ನಿರಸನ) ವಿಧೇಯಕ, 2001, ಪರ್ಯಾಲೋಚನಾ ಪ್ರಸ್ತಾವ.

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು): ಮಾನ್ಯ ಅಧ್ಯಕ್ಷರೆ, ''2001ನೇ ಸಾಲಿನ ತುಂಗಭದ್ರಾ ಸಕ್ಕರೆ (ದೇವಿ ಸಕ್ಕರೆ) ನಿಯಮಿತ (ಉದ್ಯಮದ ಆರ್ಜನೆ ಮತ್ತು ವರ್ಗಾವಣೆ) (ನಿರಸನ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.''

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಆರ್.ವಿ.ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು): ಮಾನ್ಯ ಅಧ್ಯಕ್ಷರೆ, ತುಂಗಭದ್ರಾ ಷುಗರ್ ಅಥವಾ ದೇವಿ ಷುಗರ್ ಎನ್ನುವ ಹೆಸರಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಇದೊಂದು ಸಕ್ಕರೆ ಕಾರ್ಖಾನೆಯಾಗಿ ಇತ್ತು. 1995ನೇ ಇಸವಿಯಲ್ಲಿ ಕ್ರಷಿಂಗ್ ಪ್ರಾರಂಭವಾಗಿಲ್ಲದ ಸಂದರ್ಭದಲ್ಲಿ ಜಿಲ್ಲೆಯ ಮುಖಂಡರು ಆಗಿನ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಈ ಸಕ್ಕರೆ ಕಾರ್ಖಾನೆಗೆ ಒಂದು ಕೋಟಿ ರೂಪಾಯಿಗಳ ಬ್ಯಾಂಕ್ ಗ್ಯಾರಂಟಿ ಕೊಡಬೇಕೆಂದು ಕೇಳಿದರು. ಆ ಪ್ರಕಾರವಾಗಿ ಸರ್ಕಾರದಿಂದ ಬ್ಯಾಂಕ್ ಗ್ಯಾರಂಟಿ ಕೊಡಲಾಯಿತು, ಒಂದು ವರ್ಷದೊಳಗೆ ಹಣ ವಾಪಸ್ ಕೊಡುತ್ತೇವೆಂದು ಹೇಳಿದ್ದು ಕಾರ್ಖಾನೆಯವರು, ಆ ಹಣವನ್ನು ಕೊಟ್ಟಿಲ್ಲ. ಕೊನೆಗೆ the Government had to honour the Bank Guarantee of Rs.212 lakhs. 1996-97ನೇ ಇಸವಿಯಲ್ಲಿ ಈ ಕಾರ್ಖಾನೆಯನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳಬೇಕು ಎನ್ನುವ ನಿರ್ಣಯವಾಯಿತು, ನಂತರ ಇದನ್ನು ಸುಗ್ರೀವಾಜ್ಞೆಯ ಮೂಲಕ ಸರ್ಕಾರ ಈ ಕಾರ್ಖಾನೆಯನ್ನು ಸ್ವಾಧೀನಪಡಿಸಿಕೊಂಡಿತು. ನಂತರದಲ್ಲಿ ಮಸೂದೆ ಮಂಡನೆಯಾಯಿತು, ಆದರೆ ಆ ಮಸೂದೆ ಜಾರಿಗೆ ಬರಲಿಲ್ಲ, ಏಕೆಂದರೆ, ಯಾವ ದಿನ ಪ್ರಾರಂಭಿಸಬೇಕು ಎನ್ನುವುದು ಆ ಮಸೂದೆಯಲ್ಲಿ ಇರಲಿಲ್ಲ. ಆ ಮಸೂದೆ ಪ್ರಕಾರ ಕೆಎಸ್ಎಸ್ಐಡಿಸಿ ಯವರು ಇದರ ವ್ಯಾಲ್ಯುಯೇಷನ್ ಮಾಡಬೇಕಾಗಿತ್ತು. ಕೆಎಸ್ಎಸ್ಐಡಿಸಿ. ಯವರು ಟೆಕ್ಸಾಕ್‌ಗೆ ಹೇಳಿ ಇದರ ವ್ಯಾಲ್ಯುಯೇಷನ್ ಮಾಡಿ 2945.92 ರೂ. ಲಕ್ಷ ಇದೆ. ಲಯಬಿಲಿಟೀ 5272. ಲಕ್ಷ ರೂ. ಇದೆ.

4.30 ಪಿ.ಎಂ.

ಇದೂ ಸಹ ಖಾಸಗಿ ಕೈಗಾರಿಕೆಯಾಗಿದೆ. ಸದರಿ ಕೈಗಾರಿಕೆಯನ್ನು ಹಿಂದಿನ ಸರ್ಕಾರ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿತ್ತು. ಇದರ ಬಗ್ಗೆ ನಾನೇನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇಂಥ ಬ್ಯಾಡ್ ಪ್ರಿಸಿಡೆಂಟ್ ಆಗಿರುವ ಸಂದರ್ಭದಲ್ಲಿ ಇದರ

ಬಗ್ಗೆ ನಾವು ಏನಾದರೊಂದು ನಿರ್ಣಯವನ್ನು ತೆಗೆದುಕೊಳ್ಳಲೇಬೇಕಾಗುತ್ತದೆ. ಇವತ್ತಿನ ದಿವಸ ಸರ್ಕಾರಿ ಸ್ವಾಮ್ಯದಲ್ಲಿರತಕ್ಕಂಥ ಅನೇಕ ಕೈಗಾರಿಕೆಗಳನ್ನು ನಮ್ಮ ಕೈಯಲ್ಲಿ ನಡೆಸುವುದಕ್ಕೆ ಆಗುತ್ತಿಲ್ಲ. ಅನಾರೋಗ್ಯದಲ್ಲಿರತಕ್ಕಂಥ ಅನೇಕ ಕೈಗಾರಿಕೆಗಳನ್ನು ಉತ್ತಮಪಡಿಸುವುದಕ್ಕೆ ಮತ್ತು ಖಾಸಗೀಕರಣ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಇಂಥ ಸಂದರ್ಭದಲ್ಲಿರುವಾಗ ಈ ಬಿಲ್ಲನ್ನು ರಿಪೀಲ್ ಮಾಡಬೇಕಾಗಿದೆ. ಏಕೆಂದರೆ, ಈ ಬಿಲ್ ಇನ್ನೂ ಚರ್ಚೆಗೆ ಕೂಡ ಬಂದಿಲ್ಲ. ಆದ್ದರಿಂದ ಈಗ ತಂದಿರತಕ್ಕಂಥ ಮಸೂದೆಯನ್ನು ಒಪ್ಪಿಕೊಂಡು ಇದಕ್ಕೆ ಅನುಮತಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

+ ಶ್ರೀ ಪಿ.ಜಿ.ಆರ್.ಸಿಂಧ್ಯಾ(ಕನಕಪುರ): ಮಾನ್ಯ ಅಧ್ಯಕ್ಷರೆ, ದಯವಿಟ್ಟು ಈ ಬಿಲ್ಲನ್ನು ನಾಳೆ ದಿವಸ ತೆಗೆದುಕೊಳ್ಳಿ. ಏಕೆಂದರೆ, ಇವತ್ತಿನದಿವಸ ನೀರಾ ಇಳಿಸುವಂಥ ಮಹತ್ವವಾದ ವಿಚಾರದ ಬಗ್ಗೆ ಚರ್ಚೆಯಾಗಬೇಕಾಗಿದೆ. ಇವತ್ತಿನ ದಿವಸ ನಮ್ಮ ರಾಜ್ಯದ ಸುಮಾರು 20 ಜಿಲ್ಲೆಗಳಲ್ಲಿ ರೈತರು ಧರಣಿ, ಸತ್ಯಾಗ್ರಹ ಮತ್ತು ಚಳುವಳಿ ಮಾಡುತ್ತಿದ್ದಾರೆ. ಇವತ್ತಿನದಿವಸ ಮಾನ್ಯ ಕೈಗಾರಿಕಾ ಮಂತ್ರಿಗಳು ರಿಪೀಲ್ ಮಾಡುವುದಕ್ಕೋಸ್ಕರ ಸದರಿ ಮಸೂದೆಯನ್ನು ಮಂಡಿಸಿದ್ದಾರೆ. ಆದರೆ ಮಾನ್ಯ ಮುಖ್ಯ ಮಂತ್ರಿಯವರು ಮತ್ತು ಮಂತ್ರಿಮಂಡಲದ ಸದಸ್ಯರು ಶಿವಮೊಗ್ಗ ಜಿಲ್ಲೆಯ ಮಾನ್ಯ ಶಾಸಕರ ಜೊತೆಯಲ್ಲಿ ಇದರ ಬಗ್ಗೆ ಚರ್ಚೆ ಮಾಡಿ ಆ ನಂತರ ಸದರಿ ಬಿಲ್ಲನ್ನು ತೆಗೆದುಕೊಂಡರೆ ಒಳ್ಳೆಯದು. ಆದ್ದರಿಂದ ಈ ಬಿಲ್ಲನ್ನು ನಾಳೆ ತೆಗೆದುಕೊಂಡು ಬಂದರೆ ಒಳ್ಳೆಯದು. ಹಾಗೆಯೇ ಅಲ್ಲಿರತಕ್ಕಂಥ ಕಬ್ಬು ಬೆಳೆಗಾರರಿಗೆ ಏನಾದರೊಂದು ಬದಲಿ ವ್ಯವಸ್ಥೆ ಮಾಡತಕ್ಕಂಥಾದ್ದರ ಅವಶ್ಯಕತೆ ಇದೆ. ಸನ್ಮಾನ್ಯ ಜೆ.ಎಚ್.ಪಟೇಲ್‌ರವರು ಮುಖ್ಯಮಂತ್ರಿ ಆಗಿದ್ದಂಥ ಸಂದರ್ಭದಲ್ಲಿ ದೇವೆ ಸಕ್ಕರೆ ಕಾರ್ಖಾನೆಯನ್ನು ತೆಗೆದುಕೊಂಡು ನಡೆಸಬೇಕೆಂಬ ಉದ್ದೇಶದಿಂದ ಸುಗ್ರೀವಾಜ್ಞೆ ಮೂಲಕ ನಾವು ಇದನ್ನು ತೆಗೆದುಕೊಂಡು ನಡೆಸುವುದಕ್ಕೆ ಪ್ರಯತ್ನ ಮಾಡಿದೆವು. ಆದರೆ ಅದು ವಿಫಲವಾಯಿತು. ಆ ಸಂದರ್ಭದಲ್ಲಿ ಇದಕ್ಕೆ ಯಾವುದೇ ರೀತಿಯ ದಿನಾಂಕವನ್ನು ನಿಗದಿ ಮಾಡಿರಲಿಲ್ಲ. I fully agree with you, as Industries Minister that is the policy of your government. I am not finding fault. But you have to suggest an alternative what is going to be the fate of the farmers who grows sugarcane. ಈ ವಿಷಯದ ಬಗ್ಗೆ ಅವರೆಲ್ಲರೂ ಕೂಡ ವಿಚಾರ ಮಾಡಲಿ. ಆದ್ದರಿಂದ, ಈಗ ನೀರಾ ಇಳಿಸುವ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಈ ಬಿಲ್ಲನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ಎಲ್ಲಾ ಬಿಲ್ಲಿನ ಮೇಲೆ ಚರ್ಚೆ ಮಾಡುತ್ತಾ ಹೋದರೆ ನೀರಾ ಇಳಿಸುವ ವಿಷಯ ಹಾಗೆಯೇ ಉಳಿಯುತ್ತದೆ.

ಶ್ರೀ ಕರಿಯಣ್ಣ: ಮಾನ್ಯ ಅಧ್ಯಕ್ಷರೆ, ಈ ಬಿಲ್‌ನ ಅವಶ್ಯಕತೆ ನಿಜವಾಗಿಯೂ ಕೂಡ ಇದೆ. ಆದ್ದರಿಂದ, ಸನ್ಮಾನ್ಯ ಸಿಂಧ್ಯಾರವರು ಇದಕ್ಕೆ ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಮಾನ್ಯ ಕರಿಯಣ್ಣನವರು ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಕರಿಯಣ್ಣ(ಹೊಳೆಹೊನ್ನೂರು): ಮಾನ್ಯ ಅಧ್ಯಕ್ಷರೆ, ಮಾನ್ಯ ಅರಗ ಜ್ಞಾನೇಂದ್ರರವರ ಕ್ಷೇತ್ರ ವ್ಯಾಪ್ತಿಗೆ ಈ ಸಕ್ಕರೆ ಕಾರ್ಖಾನೆ ಬರುವುದಿಲ್ಲ. ಇದು ನನ್ನ ಕ್ಷೇತ್ರಕ್ಕೆ ಬರುತ್ತದೆ. ಇದರ ಬಗ್ಗೆ ನಾವು ಈಗಾಗಲೇ ಚಳುವಳಿ ಮಾಡಿದ್ದೇವೆ. ಈ ವಿಷಯದ ಬಗ್ಗೆ ಮಾನ್ಯ ಮಂತ್ರಿಗಳಿಗಿಂತ ನನಗೆ ಚೆನ್ನಾಗಿ ಗೊತ್ತಿದೆ. ಆದ್ದರಿಂದ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಡೀಟೇಲ್ ಆಗಿ ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಿಂದಿನ ಸರ್ಕಾರ ಸದರಿ ಕಂಪನಿಯನ್ನು ಟೇಕ್ ಓವರ್ ಮಾಡಿಕೊಳ್ಳುವುದಕ್ಕೋಸ್ಕರ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿತ್ತು. ಆದರೆ, ಸುಗ್ರೀವಾಜ್ಞೆ ಹೊರಡಿಸಿದ್ದರೂ ಕೂಡ ಸದರಿ ಕಾರ್ಖಾನೆಯನ್ನು ಹಿಂದಿನ ಸರ್ಕಾರ ತೆಗೆದುಕೊಳ್ಳಲಿಲ್ಲ. ಈ ಸಂದರ್ಭದಲ್ಲಿ ಕೆಲವರಿಗೆ ಬರಬೇಕಾಗಿರತಕ್ಕಂಥ ಬಾಕಿ ಹಣವನ್ನು ಪಡೆದುಕೊಳ್ಳುವುದಕ್ಕೋಸ್ಕರ ದೂರನ್ನು ದಾಖಲು ಮಾಡಿದರು. ಸದರಿ ಕೇಸ್ ಈಗ ಚೆನ್ನೈ ಕೋರ್ಟ್‌ನಲ್ಲಿ ಇದೆ. ಈ ದೃಷ್ಟಿಯಿಂದ ಅವರು ಸದರಿ ಕಾರ್ಖಾನೆಯನ್ನು ಲಿಕ್ವಿಡೇಷನ್ ಮಾಡುವುದಕ್ಕೋಸ್ಕರ ಒಬ್ಬ ಲಿಕ್ವಿಡೇಟರ್‌ನ್ನು ನೇಮಕ ಮಾಡಿದ್ದಾರೆ. ಅವರ ಅಸೆಸ್‌ಮೆಂಟ್ ಪ್ರಕಾರ 22 ಕೋಟಿ ರೂಪಾಯಿಗಳಷ್ಟು ಬಾಕಿ ಕೊಡಬೇಕಾಗಿದೆ. ಆದರೆ 22 ಕೋಟಿಗಿಂತ ಹೆಚ್ಚು ಬಾಕಿ ಕೊಡಬೇಕಾಗುತ್ತದೆ. ಈಗ ಇವರಿಗೆಲ್ಲಾ ಬರಬೇಕಾಗಿರತಕ್ಕಂಥ ಬಾಕಿ ಹಣವನ್ನು ಸರ್ಕಾರವೇ ಕೊಡಬೇಕಾಗುತ್ತದೆ. ಈಗಾಗಲೇ ಸುಗ್ರೀವಾಜ್ಞೆ ಇರುವುದರಿಂದ ಲಿಕ್ವಿಡೇಟರ್ ಪ್ರೊಸೀಡ್ ಮಾಡುವುದಕ್ಕೆ ಆಗುತ್ತಿಲ್ಲ. ಆದ್ದರಿಂದ, ಈ ಒಂದು ಸುಗ್ರೀವಾಜ್ಞೆಯನ್ನು ವಾಪಸ್ಸು ತೆಗೆದುಕೊಂಡಾಗ ಮಾತ್ರ ಲಿಕ್ವಿಡೇಟರ್ ಅದನ್ನು ಹರಾಜು ಮಾಡಬಹುದು. ಅನಂತರ ತಕ್ಷಣ ನಾವೊಂದು ಹೊಸ ಕಾರ್ಖಾನೆಯನ್ನು ಪ್ರಾರಂಭ ಮಾಡುವುದಕ್ಕೆ ಅನುಕೂಲವಾಗುತ್ತದೆ. ಸುಗ್ರೀವಾಜ್ಞೆಯನ್ನು ವಾಪಸು ತೆಗೆದುಕೊಳ್ಳದಿದ್ದರೆ ಬೇರೆಯವರು ಮತ್ತೆ ಹೊಸದಾಗಿ ಇಲ್ಲಿ ಕಾರ್ಖಾನೆಯನ್ನು ಮಾಡುವುದಕ್ಕೆ ಆಗುವುದಿಲ್ಲ. ಹಾಗೆಯೇ ಇಲ್ಲಿರತಕ್ಕಂಥ ಕಾರ್ಖಾನೆಯನ್ನು ಮತ್ತೆ ಪ್ರಾರಂಭ ಮಾಡುವುದಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿ ಇದೆ. ಅದಕ್ಕೋಸ್ಕರ ಇದರ ಅವಶ್ಯಕತೆ ತುಂಬಾ ಇದೆ. ಇದರಿಂದ ಯಾವುದೇ ರೀತಿಯ ನಷ್ಟ

ಯಾರಿಗೂ ಸಹ ಆಗುವುದಿಲ್ಲ ಈಗಾಗಲೇ ನಾವು ರೈತ ಸಮುದಾಯದವರ ಜೊತೆ ಮತ್ತು ಜಿಲ್ಲಾ ಮಂತ್ರಿ ಹಾಗೂ ಸಕ್ಕರೆ ಮಂತ್ರಿಯವರ ಜೊತೆ ಇದರ ಸಾಧಕಬಾಧಕಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ಟೇಕ್-ಓವರ್ ವಾಪಸ್ಸು ತೆಗೆದುಕೊಂಡರೆ ಮಾತ್ರ ಲಿಕ್ವಿಡೇಟರ್ ಪ್ರೊಸೀಡ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೇ ಇದ್ದರೆ ಇಲ್ಲಿ ಇರತಕ್ಕಂಥ ಎಲ್ಲಾ ಬಾಕಿಗಳಿಗೆ ಸರ್ಕಾರವೇ ಜವಾಬ್ದಾರಿಯಾಗಬೇಕಾಗುತ್ತದೆ. ಸುಗ್ರೀವಾಜ್ಞೆಯನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಜಿಲ್ಲಾ ಮಂತ್ರಿಯವರಿಗೆ ಹೇಳಿ, ಇದನ್ನು ಕ್ಯಾಬಿನೆಟ್‌ನಲ್ಲಿಟ್ಟು ಇದರ ಬಗ್ಗೆ ಅಲ್ಲಿಯೂ ಕೂಡ ಚರ್ಚೆಯಾಗಿದೆ. ಆ ನಂತರ ಇವತ್ತು ಈ ಬಿಲ್ಲ್‌ನ್ನು ಇಲ್ಲಿ ತರಲಾಗಿದೆಯಷ್ಟೆ, ಇದೇನೂ ಬಹಳ ಪ್ರಮುಖವಾದಂಥಾದ್ದಲ್ಲ ಮತ್ತು ಸರ್ಕಾರಕ್ಕೆ ಹಾಗೂ ರೈತ ವರ್ಗದವರಿಗೂ ಕೂಡ ಇದರಿಂದ ಯಾವುದೇ ರೀತಿ ನಷ್ಟವಾಗುವುದಿಲ್ಲ. ಹೊಸದಾಗಿ ಒಂದು ಲಿಮಿಟೆಡ್ ಕಂಪನಿಯನ್ನು ಮಾಡುವುದಕ್ಕೋಸ್ಕರ ಈಗಾಗಲೇ ಷೇರು ಕಲೆಕ್ಟ್ ಮಾಡುವುದಕ್ಕೆ ರೈತ ಬಾಂಧವರ ಜೊತೆಯಲ್ಲಿ ಮತ್ತು ಕಾರ್ಮಿಕರ ಜೊತೆ ಹಾಗೂ ಬಂಡವಾಳ ಶಾಹಿರವರ ಜೊತೆ ಇದರ ಬಗ್ಗೆ ಡೀಟೇಲ್ ಆಗಿ ಚರ್ಚೆ ಮಾಡಿದ್ದೇವೆ. ಮಾನ್ಯ ಕೈಗಾರಿಕಾ ಸಚಿವರು ಶಿವಮೊಗ್ಗ ಜಿಲ್ಲೆಗೆ ಬಂದಾಗ ಅಲ್ಲಿ ಇರತಕ್ಕಂಥ ಶ್ರೀ ನಾರಾಯಣಶಾಸ್ತ್ರಿ ಮತ್ತು ಮಠಾಧೀಶರು ಎಲ್ಲರೂ ಕುಳಿತುಕೊಂಡು ಇದರ ಬಗ್ಗೆ ಚರ್ಚೆ ಮಾಡಿ ಷೇರು ಕಲೆಕ್ಷನ್ ಮಾಡುವುದಕ್ಕೋಸ್ಕರ ತೀರ್ಮಾನ ತೆಗೆದುಕೊಂಡು ನಾವು ಈಗಾಗಲೇ ಈ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಆದ್ದರಿಂದ ದಯಮಾಡಿ ಈ ಬಿಲ್ಲ್‌ನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಮಾನ್ಯ ಸಿಂಧ್ಯರವರು ಅವಕಾಶ ಮಾಡಿಕೊಡಬೇಕೆಂದು ಏನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್.ಪಿ.ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ಸದರಿ ಕೈಗಾರಿಕೆ 1996-97ರಿಂದ ಬಂದ್ ಆಗಿದೆ. ಕಬ್ಬನ್ನು ಕ್ರಷ್ ಮಾಡತಕ್ಕಂಥ ಕೆಲಸ ಇದುವರೆಗೂ ಸಹ ಆಗಿಲ್ಲ. ಈಗ ಲಿಕ್ವಿಡೇಟರ್ ಒಬ್ಬರನ್ನು ನೇಮಕ ಮಾಡಲಾಗಿದೆ. ನಾವು ಇದನ್ನು ಹಾಗೆಯೇ ಇಟ್ಟುಕೊಂಡರೆ ಫರ್ದರ್ ಪ್ರೊಸೀಡ್ ಮಾಡುವುದಕ್ಕೆ ಆಗುವುದಿಲ್ಲ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಬಹಳಷ್ಟು ಕೈಗಾರಿಕೆಗಳು ಅನಾರೋಗ್ಯದಲ್ಲಿ ಇರುವಂತಹ ಪ್ರತಿಯೊಂದು ಕೈಗಾರಿಕೆಗಳನ್ನು ಖಾಸಗಿಯವರಿಗೆ ಕೊಡುತ್ತಾ ಹೋದರೆ ನಾವು ಸರ್ಕಾರ ನಡೆಸುವುದಕ್ಕೆ ಕಷ್ಟವಾಗಬಹುದು. ಈ ಕಾಯಿದೆ ಇನ್ನೂ ಜಾರಿಗೆ ಬಂದಿಲ್ಲ. 1995ರಲ್ಲಿ ಇದ್ದಂಥ ಮಾನ್ಯ ಮುಖ್ಯಮಂತ್ರಿಯವರು ಇದಕ್ಕೆ ದುಡ್ಡು ಕೊಟ್ಟರಲಿಲ್ಲ. ಕಂಪನಿ ಸರಿಯಾಗಿ ನಡೆಯುತ್ತಿಲ್ಲ. ಆದ್ದರಿಂದ ಸರ್ಕಾರ ಇದಕ್ಕೆ ಸಹಾಯ ಮಾಡಬೇಕೆಂದು ಅಲ್ಲಿನ ಶಾಸಕರು ಮತ್ತು ಪ್ರತಿನಿಧಿಗಳು ಬಂದು ಆಗಿನ ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಿಕೊಂಡಿದ್ದರು. ಸಕ್ಕರೆ ಕಾರ್ಖಾನೆಯನ್ನು ಖಾಸಗಿಯವರಿಗೆ ಕೊಡಬಾರದೆಂಬ ಉದ್ದೇಶದಿಂದ ಆಗಿನ ಸರ್ಕಾರ ಒಳ್ಳೆಯ ಉದ್ದೇಶದಿಂದ ಇದನ್ನು ಮಾಡಿತ್ತು. ಸ್ಟೇಟ್

ಬ್ಯಾಂಕ್ ಆಫ್ ಇಂಡಿಯಾಗೆ 100 ಲಕ್ಷ ರೂಪಾಯಿಗಳ ಒಂದು ಗ್ಯಾರಂಟಿಯನ್ನು ಸರ್ಕಾರ ಕೊಟ್ಟಿತ್ತು. ಒಂದು ವರ್ಷದೊಳಗೆ ಸಕ್ಕರೆ ಕಂಪನಿಯವರು ಆ ಹಣವನ್ನು ತುಂಬ ಬೇಕಾಗಿತ್ತು. ಆದರೆ ತುಂಬಲಿಲ್ಲ. 242 ಲಕ್ಷ ರೂಪಾಯಿಗಳನ್ನು to honour the commitment, government had to pay from the treasury. ಅಲ್ಲಿ ಲಿಕ್ವಿಡೇಟರ್ ಕೆಲಸ ಮಾಡಬೇಕಾದರೆ ಇವತ್ತು ಈ ಬಿಲ್ಲ್ಸನ್ನು ನಾವು ಪಾಸ್ ಮಾಡಿಕೊಡಲೇ ಬೇಕಾಗುತ್ತದೆ. ರೈತರ ಹಿತದೃಷ್ಟಿಯಿಂದ ಈ ಕೆಲಸವನ್ನು ಮಾಡತಕ್ಕಂಥಾದ್ದು ಅವಶ್ಯಕತೆ ಇದೆ.

ಶ್ರೀ ಅರಗಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಾವು ಡೀಟೇಲ್ ಆಗಿ ಚರ್ಚೆ ಮಾಡಬೇಕಾಗುತ್ತದೆ. ಏಕೆಂದರೆ ಶಿವಮೊಗ್ಗ ಜಿಲ್ಲೆಗೆ ಅತ್ಯಂತ ಪ್ರಮುಖವಾದಂಥ ಒಂದು ಆರ್ಥಿಕ ಮೂಲ ಈ ದೇಪು ಸಕ್ಕರೆ ಕಾರ್ಖಾನೆಯಾಗಿದೆ. ಅಲ್ಲಿ ಏನೇನು ಅವ್ಯವಹಾರ ಮಾಡಿ ಮತ್ತು ಸರ್ಕಾರದ ದುಡ್ಡನ್ನು ತೆಗೆದುಕೊಂಡು ಯಾರೋ ಹೋಗಿದ್ದಾರೆ. ಅವೆಲ್ಲವನ್ನೂ ತಾವು ಬಿಟ್ಟುಕೊಂಡು ಈ ರೀತಿಯಾಗಿ ಮಾಡುತ್ತೇವೆಂದು ಹೇಳುವುದರಲ್ಲಿ ಏನೂ ಅರ್ಥ ಇಲ್ಲ. ಸದರಿ ಕಾರ್ಖಾನೆಯಿಂದ ಇನ್ನೂ ಅನೇಕ ರೈತರಿಗೆ ಹಣ ಬರಬೇಕಾಗಿದೆ ಮತ್ತು ತುಂಬಾ ಜನ ಕಾರ್ಮಿಕರು ಸಹ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವತ್ತಿನ ದಿವಸ ಈ ರೀತಿಯಾದಂಥ 10 ಹೊಸ ಕೈಗಾರಿಕೆಗಳನ್ನು ಮಾಡುವುದಕ್ಕೆ ಏನೂ ತೊಂದರೆ ಇಲ್ಲ.

ಶ್ರೀ ಕರಿಯಣ್ಣ: ಮಾನ್ಯ ಅಧ್ಯಕ್ಷರೆ, ಟೀಕ್-ಓವರ್ ಇನ್ನೂ ಜಾರಿಗೆ ಬಂದಿಲ್ಲ.

(ಗೊಂದಲ)

ಅಧ್ಯಕ್ಷರು: ಯಾರಾದರೊಬ್ಬರು ಮಾತನಾಡಿ.

ಶ್ರೀ ಕರಿಯಣ್ಣ: ಮಾನ್ಯ ಅಧ್ಯಕ್ಷರೆ, ಟೀಕ್-ಓವರ್ ಇನ್ನೂ ಜಾರಿಗೆ ಬಂದಿಲ್ಲ. ನಾವು ಇದರ ಬಗ್ಗೆ ಚಳುವಳಿಯನ್ನು ಮಾಡಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿಗೆ ಸರ್ಕಾರದ ಕಡೆಯಿಂದ ಹಣವನ್ನು ಕೊಡಿಸಿದ್ದೇವೆ. ಸುಗ್ರೀವಾಜ್ಞೆಯನ್ನು ವಾಪಸ್ಸು ತೆಗೆದುಕೊಳ್ಳದೇ ಹೋದರೆ ಹೊಸ ಕೈಗಾರಿಕೆ ಮಾಡುವುದಕ್ಕೆ ಆಗುವುದಿಲ್ಲ ಮತ್ತು ಈಗ ಇರತಕ್ಕಂಥ ಕೈಗಾರಿಕೆಯನ್ನು ಲಿಕ್ವಿಡೇಟರ್‌ರವರು ಹರಾಜು ಮಾಡುವುದಕ್ಕೆ ಆಗುವುದಿಲ್ಲ. ಇದೊಂದು ಜೀವ ಇಲ್ಲದಂತಹ ಕೈಗಾರಿಕೆಯಾಗಿದೆ. ಇದನ್ನು ನಾವು ಮಾಡದೇ ಹೋದರೆ ರೈತರಿಗೆ ಸಹಾಯ ಮಾಡುವುದಕ್ಕೆ ಆಗುವುದಿಲ್ಲ. ಈ ಕಾರ್ಖಾನೆಗೆ ನಾನು ಬೆಳೆಯತಕ್ಕಂಥ ಕಬ್ಬು ಜಾಸ್ತಿ ಹೋಗುತ್ತಿದೆ. ಶಿವಮೊಗ್ಗ ತಾಲ್ಲೂಕಿನ ಶಾಸಕರಾದ ಮಾನ್ಯ ಚಂದ್ರಶೇಖರಪ್ಪನವರು ಮತ್ತು ನಾನು ರೈತ ಸಂಘದವರ ಜೊತೆ ಮತ್ತು ಜಿಲ್ಲಾ ಮಂತ್ರಿಯವರ ಜೊತೆ ಮಾತನಾಡಿದ್ದೇವೆ. ಮಾನ್ಯ ಅರಗ ಜ್ಞಾನೇಂದ್ರರವರಿಗೆ ಇದರ

ಮಾಹಿತಿ ಸರಿಯಾಗಿ ಗೊತ್ತಿಲ್ಲವೆಂದು ಕಾಣುತ್ತದೆ. ಆದ್ದರಿಂದ ಇದಕ್ಕೆ ತಾವು ಅಡ್ಡಬರಬೇಡಿ. ಒಂದು ವೇಳೆ ನೀವು ಅಡ್ಡ ಬಂದರೆ ಏನಾಗುತ್ತದೆಂದರೆ, ಈ ಕಾರ್ಖಾನೆಗೆ ಅನಾನುಕೂಲವಾಗುತ್ತದೆ ಮತ್ತು ರೈತರಿಗೆ ನಾವು ಸಹಾಯ ಮಾಡಿದಂತೆ ಆಗುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಮಾನ್ಯ ಕರಿಯಣ್ಣನವರು ಯಾವ ರೀತಿಯಾಗಿ ಹೋರಾಟ ಮಾಡಿದ್ದಾರೆಯೋ ಅದೇ ರೀತಿಯಾಗಿ ನಾವೂ ಕೂಡ ಅಲ್ಲಿನ ಕಾರ್ಮಿಕರ ಮತ್ತು ಕಬ್ಬು ಬೆಳೆಗಾರರ ಪರವಾಗಿ ಹೋರಾಟ ಮಾಡಿದ್ದೇವೆ. ಹಿಂದೆ ಶಾಸಕರಾಗಿದ್ದಂಥ ಮಾನ್ಯ ಈಶ್ವರಪ್ಪನವರು ಹಾಗೂ ಮಾನ್ಯ ಆಯನೂರು ಮಂಜುನಾಥ್‌ರವರು ಮತ್ತು ಇತರೇ ಸಂಸದೀಯ ಸದಸ್ಯರು ನಮ್ಮ ಜಿಲ್ಲೆಯ ಮಾನ್ಯ ಜೆ.ಎಚ್.ಪಟೇಲ್‌ರವರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಇದನ್ನು ಸರ್ಕಾರವೇ ವಹಿಸಿಕೊಳ್ಳಬೇಕೆಂದು ಸಾಕಷ್ಟು ಒತ್ತಡ ತಂದಿದ್ದೆ.

ಶ್ರೀ ಕರಿಯಣ್ಣ: ಟೇಕ್-ಓವರ್ ಆಗಿಲ್ಲ.

ಶ್ರೀ ಅರಗ ಜ್ಞಾನೇಂದ್ರ: ಇದು ಯಾವ ಕಾರಣಕ್ಕಾಗಿ ಟೇಕ್-ಓವರ್ ಆಗಿಲ್ಲ ಎನ್ನತಕ್ಕಂಥಾದ್ದು ನಮಗೆ ಗೊತ್ತಿಲ್ಲ. ಆ ಸಂದರ್ಭದಲ್ಲಿ ಇದಕ್ಕೆ ಕೇಂದ್ರದ ಒಪ್ಪಿಗೆಯನ್ನೂ ಸಹ ನಾವು ತಂದಿದ್ದೆವು.

ಶ್ರೀ ಕರಿಯಣ್ಣ: ಆಗ ಇದ್ದಂಥ ಸರ್ಕಾರ ಇದನ್ನು ಜಾರಿಗೆ ತರಲಿಲ್ಲ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಈ ಬಿಲ್ಲನ್ನು ನಾಳೆ ತೆಗೆದುಕೊಳ್ಳೋಣ. ಏಕೆಂದರೆ ಮಾನ್ಯ ಕಾಗೋಡು ತಿಮ್ಮಪ್ಪನವರೂ ಸಹ ಬರಲಿ. ಇದರ ಬಗ್ಗೆ ಏಸ್ತುತವಾದಂಥ ಚರ್ಚೆ ಮಾಡೋಣ. ಹಾಗೆಯೇ ಅಲ್ಲಿರತಕ್ಕಂಥ ಬಹಳಷ್ಟು ರೈತರಿಗೆ ಬಾಕಿ ಹಣ ಕೊಡಬೇಕಾಗಿದೆ. ಸರ್ಕಾರ ಇದಕ್ಕೆ ಗ್ಯಾರಂಟಿಯನ್ನು ಸಹ ಕೊಟ್ಟಿದೆ.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ಸರ್ಕಾರ ಯಾವುದೇ ರೀತಿಯ ಗ್ಯಾರಂಟಿಯನ್ನು ಕೊಟ್ಟಿಲ್ಲ. ಸರ್ಕಾರ 100 ಲಕ್ಷ ರೂಪಾಯಿಗಳ ಬ್ಯಾಂಕ್ ಗ್ಯಾರಂಟಿಯನ್ನು ಮಾತ್ರ ಕೊಟ್ಟಿತ್ತು. 242 ಲಕ್ಷ ರೂಪಾಯಿಗಳನ್ನು ಹಾನರ್ ಮಾಡಿದ್ದಾರೆ. ಇದರಲ್ಲಿ ಸರ್ಕಾರದ ಕಮಿಟ್‌ಮೆಂಟ್ ಏನೂ ಇಲ್ಲ. ನಾನು ಹೇಳುವುದನ್ನು ಮಾನ್ಯ ಸದಸ್ಯರು ದಯವಿಟ್ಟು ತಿಳಿದುಕೊಳ್ಳಬೇಕು. ಸುಗ್ರೀವಾಜ್ಞೆ ಬಿಲ್ ಬಂದಿದೆ. ಆದರೆ ಈ ಕಾಯಿದೆ ಇನ್ನೂ ಜಾರಿಗೆ ಬಂದಿಲ್ಲ. ಇದರಿಂದ ಸದರಿ ಸಕ್ಕರೆ ಕಾರ್ಖಾನೆ ಹಾಗೆಯೇ ಉಳಿದಿದೆ. KSIDC was asked to make valuation. ಟೆಕ್ನಿಕಾಸ್ ವ್ಯಾಲ್ಯೂವೇಷನ್ ಮಾಡಿರತಕ್ಕಂಥಾದ್ದು ನಾನು ಈಗಾಗಲೇ

ತಮಗೆ ಹೇಳಿದ್ದೇನೆ. From the sale of proceeds ಈ ಸಂದರ್ಭದಲ್ಲಿ ಅವರು ಮಾಡಿರತಕ್ಕಂಥ ರೇಷಿಯೋ ಪ್ರಕಾರ 40 ಪರ್ಸೆಂಟ್ ಲೇಬರ್ ಮತ್ತು 40 ಪರ್ಸೆಂಟ್‌ನಷ್ಟು ರೈತರಿಗೆ ಹಾಗೂ 20 ಪರ್ಸೆಂಟ್‌ನಷ್ಟು ಬ್ಯಾಂಕ್‌ಗಳಿಗೆ ಕೊಟ್ಟರು. ಆದರೆ 29 ಲಕ್ಷ 82 ಸಾವಿರ ರೂಪಾಯಿಗಳಷ್ಟು ಇನ್ನೂ ರೈತರಿಗೆ ಬಾಕಿ ಕೊಡಬೇಕಾಗಿದೆ. 1996-97ರಿಂದ ದೇವು ಸಕ್ಕರೆ ಕಾರ್ಖಾನೆ ಬಂದ್ ಆಗಿದೆ. ಅಲ್ಲಿಂದ ಇಲ್ಲಿಯವರೆಗೆ ರೈತರ ಬಾಕಿ ಕೊಡಬೇಕೆಂದು ಪ್ರಸ್ತಾಪವನ್ನು ಮಾಡಲಾಗಿದೆ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ರೈತರ ಹಣವನ್ನು ವಾಪಸ್ಸು ಕೊಡಬೇಕೆಂದು ಪ್ರತಿಪಕ್ಷಗಳು ಹೇಳಿದರೂ ಕೂಡ ಸರ್ಕಾರದವರು ಕೆಲಸಕ್ಕೆ ಹಾಕಿಕೊಳ್ಳದಿದ್ದರೆ ಏನು ಮಾಡುವುದು?

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, 1996-97ರಿಂದ ಕಾರ್ಖಾನೆ ಬಂದ್ ಆಗಿದೆ. ನಾವೇನು ಮಾಡಲು ಸಾಧ್ಯ? please understand. The Government has not taken over the factory. I am assuring you. ನಮಗೆ ಸರ್ಕಾರಿ ಕೈಗಾರಿಕೆಗಳನ್ನು ನಡೆಸಲು ಆಗುತ್ತಿಲ್ಲ, ಹಾಗೆಂದು ಸರ್ಕಾರ ಎಲ್ಲಾ ಕೈಗಾರಿಕೆಗಳನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕಾಗುತ್ತದೆಯೇ? ಹಾಗೆ ಮಾಡಿದರೆ ನಾವು ಸರ್ಕಾರವನ್ನು ನಡೆಸಲಾಗುವುದಿಲ್ಲ. ಇಲ್ಲಿ ಸಂಬಳಕ್ಕೆ ಹಣವಿರುವುದಿಲ್ಲ, ಅದು ಖಾಸಗಿಗೆ ಸಂಬಂಧಪಟ್ಟದ್ದು, ನಮಗೆ ಏನು ಸಂಬಂಧಪಟ್ಟದೆ? ಸರ್ಕಾರ ಏನು ಸಹಾಯ ಮಾಡುತ್ತದೆಂದರೆ, ಸರ್ಕಾರದ ಪಾಲಿಸಿ ಇದೆ, ಆ ರೀತಿ ಮಾಡಬೇಕಾಗುತ್ತದೆ. ಅನಾರೋಗ್ಯದಿಂದಿರುವ ಕೈಗಾರಿಕೆಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿದರೆ ಸರ್ಕಾರವು ಉಳಿಯಲು ಸಾಧ್ಯವಿಲ್ಲ. ನಮ್ಮ ಸರ್ಕಾರಿ ಕೈಗಾರಿಕೆಗಳ ಸಮಸ್ಯೆಗಳನ್ನು ಬಗೆಹರಿಸಲು ಆಗುತ್ತಿಲ್ಲ, ಕ್ಲೋಸ್ ಮಾಡಿ ಪ್ರೈವೇಟೈಜ್ ಮಾಡುತ್ತಿದ್ದೇವೆ, ಇಂತಹ ಪರಿಸ್ಥಿತಿಯಲ್ಲಿ ಖಾಸಗಿ ಕಾರ್ಖಾನೆಯನ್ನು ನಾವು ಹೇಗೆ ತೆಗೆದುಕೊಳ್ಳುವುದಕ್ಕೆ ಬರುತ್ತದೆ? ರೈತರಿಗೆ ಒಳ್ಳೆಯದಾಗುತ್ತದೆಂದರೆ, ಕಾರ್ಖಾನೆ ಮುಚ್ಚಿದೆ, ಅಸೆಟ್ ಇದೆ ಎಂದರೆ, ಲಯಾಬಿಲಿಟೀಸ್ ಜಾಸ್ತಿ ಇದೆ. ಅದನ್ನು ತೆಗೆದುಕೊಳ್ಳುವುದರಿಂದ ಏನು ಅಡ್ವಾನ್‌ಟೇಜ್? ಸರ್ಕಾರ ಏನಾದರೂ ಮಾಡಬೇಕಾದರೆ ಜನರು ಅಥವಾ ರೈತರ ಹಿತಾಸಕ್ತಿಯಿಂದ ಮಾಡಬೇಕಾಗುತ್ತದೆ. ಮಾನ್ಯ ಶಾಸಕರು ಹೇಳಿದಂತೆ where is the interest here? ಹೊಸ ಕಾರ್ಖಾನೆಯನ್ನು ಪ್ರಾರಂಭ ಮಾಡಬೇಕಾದರೂ ಷೇರ್ ಕಲೆಕ್ಷನ್‌ಗೆ ಪ್ರಾರಂಭ ಮಾಡಿದರೆ ರಿಸರ್ವ್ಡ್ ಏರಿಯಾದಲ್ಲಿ ಈ ಕಾರ್ಖಾನೆಯಿಂದ ಆ ಕಾರ್ಖಾನೆಗೆ ವರ್ಗಾವಣೆ ಮಾಡಬೇಕಾಗುತ್ತದೆ, If you co-operate and the Bill is passed, the matter will be sorted out.

ಶ್ರೀ ಆರಗ ಜ್ಞಾನೇಂದ್ರ: ದಯವಿಟ್ಟು ಮಾನ್ಯ ಮಂತ್ರಿಗಳು ತಪ್ಪಾಗಿ ಭಾವಿಸಬಾರದು, ನಾನು ಬಿಲ್ಲನ್ನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆಂದಲ್ಲ. ಶಿವಮೊಗ್ಗ ಜಿಲ್ಲೆಯಲ್ಲಿ ಬಹಳ ಪ್ರಮುಖವಾದ ಮೂರು ಉದ್ದಿಮೆಗಳು ಇವೆ. ಬೆಂಕಿಪೊಟ್ಟಣ ನಾಶವಾಯಿತು, ಗಂಧದ ಎಣ್ಣೆ ನಾಶವಾಯಿತು, ದೇವಿ ಷುಗರ್ ಹೋಯಿತು. ಇನ್ನೊಂದು ಆಯಿಲ್ ಪಾಮ. ಅದು ಭದ್ರಾವತಿಯಲ್ಲಿದೆ. ಸರ್ಕಾರದ ಹಣ ಎಷ್ಟಿದೆ ಸ್ವಾಮಿ ಅದರಲ್ಲಿ? ಇವತ್ತು ಸರ್ಕಾರ ಅದರ ಯೋಗಕ್ಷೇಮ ನೋಡಿಕೊಳ್ಳದೆ, ನಾವು ಯಾವುದೇ ಒತ್ತಡವನ್ನು ಹಾಕಿದರೂ ಯೋಚಿಸದೆ ಇವತ್ತು ಎಲ್ಲವನ್ನೂ ಮುಳುಗಿಸಿ ಕೈ ಎತ್ತಿಕೊಂಡು ಹೋಗುವಂತಹ ಪರಿಸ್ಥಿತಿಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಪಸ್ತುತವಾದಂತಹ ಚರ್ಚೆಯಾಗಬೇಕೆಂದು ನಾನು ಹೇಳಿದ್ದೇನೆಯೇ ಹೊರತು ಬೇರೆ ಏನೂ ಇಲ್ಲ. ಮಾನ್ಯ ಜಿಲ್ಲಾ ಮಂತ್ರಿಗಳು ಬರಲಿ, ಚರ್ಚಿಸೋಣ ಅವಸರದಲ್ಲಿ ಇವತ್ತೇ ಬಿಲ್ ಪಾಸ್ ಮಾಡಬಹುದು ಬೇಡ.

ಶ್ರೀ ಆರ್.ವಿ.ದೇಶಪಾಂಡೆ: ಇದು ಸಚಿವ ಸಂಪುಟದ ನಿರ್ಣಯವಾಗಿದ್ದು, ಆ ನಿರ್ಣಯದ ಪ್ರಕಾರ ಆ ಸಚಿವ ಸಂಪುಟದಲ್ಲಿ ಜಿಲ್ಲಾ ಮಂತ್ರಿಗಳೂ ಕೂಡ ಭಾಗಿಯಾಗಿದ್ದಾರೆ, ಹಾಗಾಗಿ ನಾನು ಬಿಲ್ ಇಂಟ್ರಡ್ಯೂಸ್ ಮಾಡಿದ್ದೇನೆ. ನಾವೇನೂ ಕೆಟ್ಟದ್ದು ಮಾಡುತ್ತಿಲ್ಲ, ಈ ಕಾರ್ಖಾನೆಯನ್ನು ನಾವು ಟೇಕ್-ಓವರ್ ಮಾಡಿಲ್ಲ. ಈ ಬಿಲ್ ಇನ್ನೂ ಜಾರಿಗೆ ಬಂದಿರುವುದಿಲ್ಲ, ಇದನ್ನು ಅರ್ಥ ಮಾಡಿಕೊಳ್ಳಿ.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆಂದರೆ, ಇವತ್ತು, ನಾಳೆ ಏನೂ ಆಗುವುದಿಲ್ಲ, ಮಾನ್ಯ ಸಚಿವರಾದ ಶ್ರೀ ಕಾಗೋಡು ತಿಮ್ಮಪ್ಪನವರು ಬರುತ್ತಾರೆ, ನಾಳೆ ಇದರ ಬಗ್ಗೆ ಚರ್ಚೆ ಮಾಡೋಣ ಎಂದು ಹೇಳುತ್ತಿದ್ದಾರೆ.

ಶ್ರೀ ಕರಿಯಣ್ಣ: ನಾವು ಮಾನ್ಯ ಸಚಿವರಾದ ಶ್ರೀ ಕಾಗೋಡು ತಿಮ್ಮಪ್ಪನವರನ್ನು ಭೇಟಿ ಮಾಡಿ ಅವರ ಜೊತೆಯಲ್ಲಿಯೇ ಚರ್ಚೆ ಮಾಡಿದ್ದೇವೆ. ಈ ಕಾರ್ಖಾನೆಯನ್ನು ರೀ-ಓಪನ್ ಮಾಡಲು ಏನೇನು ಮಾಡಬೇಕೆಂಬ ಬಗ್ಗೆ ಚರ್ಚಿಸಿದ್ದೇವೆ. ಅಲ್ಲಿ 2000 ಎಕರೆ ಸರ್ಕಾರದ ಭೂಮಿ ಇದೆ, ಅದನ್ನು ಸೇರಿಸಿ ಹರಾಜಿಗಿಟ್ಟಿದ್ದರು, ಅದನ್ನು ಜಿಲ್ಲಾಧಿಕಾರಿಗಳು ಕೋರ್ಟಿಗೆ ಹಾಕಿ ಸರ್ಕಾರಿ ಭೂಮಿ ನಮಗೆ ಬರಬೇಕಾಗಿದ್ದು, ಇದರ ವ್ಯಾಲ್ಯೂವನ್ನು ರಿಡ್ಯೂಸ್ ಮಾಡಬೇಕೆಂದು ಹೇಳಿದ್ದೇವೆ. ಆ ಕಾರ್ಖಾನೆಯನ್ನು ಏನಾದರೂ ಮಾಡಿ ಲಿಕ್ವಿಡೇಟರ್ ಆಕ್ಷನ್ ಮಾಡಿದಾಗ, ಕಡಿಮೆ ರೇಟ್ ಸಿಕ್ಕಿ, ಯಾರಾದರೂ ಶ್ರೀಮಂತರು ತೆಗೆದುಕೊಂಡು ಬಂಡವಾಳ ಹೂಡಿ ಓಪನ್ ಮಾಡುವವರನ್ನು ನಾವು ನೋಡುತ್ತಿದ್ದೇವೆ. ಈ ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳದೆ ಹೋದರೆ ಲಿಕ್ವಿಡೇಟರ್ ಆ್ಯಕ್ಷನ್ ಮಾಡುವುದಕ್ಕೆ ಬರುವುದಿಲ್ಲ. ಆ ಕಾರ್ಖಾನೆ

ಶಾಶ್ವತವಾಗಿ ತೆರೆಯುವುದಿಲ್ಲ. ಆದುದರಿಂದ ಸರ್ಕಾರದಿಂದ ಎಲ್ಲಾ ಸವಲತ್ತುಗಳನ್ನು ಕೊಡುತ್ತೇವೆ, ಯಾರಾದರೂ ಬಂದು ಬಂಡವಾಳ ಹೂಡಿ ನಡೆಸುವುದಿದ್ದರೆ ಈ ರೈತರಿಗೆ ಅನುಕೂಲವಾಗಲೆಂದು ರೈತ ಸಂಘದವರೊಡನೆ ಮಾತನಾಡಿದ್ದೇವೆ. ಕೊನೆಗೆ ಕ್ಯಾಬಿನೆಟ್‌ನಲ್ಲಿ ಇದನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ದಯವಿಟ್ಟು ಈ ಬಿಲ್ ವಾಪಸ್ಸು ತೆಗೆದುಕೊಂಡರೆ, ಅದು ನಮಗೆ ಅನುಕೂಲವಾಗುತ್ತದೆ ಮತ್ತು ಆ ಕಾರ್ಖಾನೆಯನ್ನು ಹೊಸದಾಗಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ನಮ್ಮ ಭಾಗದ ರೈತರಿಗೆ 60 ಪರ್ಸೆಂಟ್ ಅನುಕೂಲವಾಗುತ್ತದೆ. ತಾವು ಸುಮ್ಮನೆ ಹಠ ಹಿಡಿಯಬೇಡಿ.

ಅಧ್ಯಕ್ಷರು: ಯಾವುದಾದರೂ ಒಂದು ಫೈನಲ್ ಡಿಸಿಷನ್ ಹೇಳಿ, ಇದನ್ನು ತೆಗೆದುಕೊಳ್ಳಬೇಕೋ, ಬೇಡವೋ ಹೇಳಿ.

ಶ್ರೀ ಅರಗ ಜ್ಞಾನೇಂದ್ರ: ನಾನು ಅವರ ಗಮನಕ್ಕೆ ತರುವುದಿಷ್ಟೆ, ರೈತರ ಪರವಾದ ಉದ್ದಿಮೆಗಳಿದ್ದು, ಇವನ್ನು ಮುಚ್ಚಿಕೊಂಡು ಹೋಗುವುದನ್ನು ಮಾಡಿದರೆ ಇದರ ಮೇಲೆ ಡಿಪೆಂಡ್ ಆಗಿರುವ ಸಾವಿರಾರು ರೈತರು ಹಾಳಾಗಿ ಹೋಗುತ್ತಿದ್ದಾರೆ.

ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ನೀವೇ ಕುದುರೆಮುಖ ಕಾರ್ಖಾನೆಯನ್ನು ಮುಚ್ಚಿಬಿಡಿ ಎಂದು ಹೇಳುತ್ತಿದ್ದೀರಿ.

ಶ್ರೀ ಅರಗ ಜ್ಞಾನೇಂದ್ರ: ಅದು ರೈತರ ಕಾರ್ಖಾನೆಯಲ್ಲ, ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು. ನಾವು ಕುದುರೆಮುಖ ಕಾರ್ಖಾನೆಯನ್ನು ಮುಚ್ಚಿ ಎಂದು ಹೇಳಿದ್ದು ರೈತರ ಪರವಾಗಿಯೇ ರೈತರಿಗೆ ಅನುಕೂಲವಾಗುವಂತಹ ತುಂಗಭದ್ರಾ ನದಿಗಳು ಉಳಿಯಬೇಕು, ರೈತರು ಉಳಿಯಬೇಕು, ಈ ಕಬ್ಬು ಬೆಳೆಯಬೇಕು, ಹೊಸ ಕಾರ್ಖಾನೆಗಳು ಆರಂಭವಾಗಬೇಕು, ಕೃಷಿಯಿಂದ ಸಾವಿರಾರು ಕೋಟಿ ರೂಪಾಯಿಗಳು ಏನು ಬರುತ್ತಿದೆ, ಅದು ಉಳಿಯಬೇಕೆನ್ನುವ ಕಾರಣದಿಂದ ನಾನು ಕುದುರೆಮುಖ ಕಾರ್ಖಾನೆಯ ಬಗ್ಗೆ ಹೇಳಿದ್ದೆ, ಬೇರೆ ಏನೂ ಇಲ್ಲ. ಇದರ ಜೊತೆಗೆ ದೇವು ಸಕ್ಕರೆ ಕಾರ್ಖಾನೆ ಮತ್ತು ಆಯಿಲ್ ಫಾಮ್ ಈಗಾಗಲೇ ಬಂದ್ ಆಗಿದೆ.

ಅಧ್ಯಕ್ಷರು: ದೇವು ಸಕ್ಕರೆ ಕಾರ್ಖಾನೆಯ ಬಗ್ಗೆ ಮಾತನಾಡಿ, ಅದಕ್ಕೂ ಇದಕ್ಕೂ ಸಂಬಂಧ ಏತಕ್ಕಾಗಿ ಬೆಳೆಸುತ್ತೀರಿ?

ಶ್ರೀ ಅರಗ ಜ್ಞಾನೇಂದ್ರ: ಅದನ್ನೂ ಕೂಡ ಹೀಗೆ ಮಾಡಿಬಿಡಿ, ಇದರ ಬಗ್ಗೆ ರೈತರಿಗೆ ಏನು ಗ್ಯಾರಂಟಿ, ಮದ್ರಾಸಿನಲ್ಲಿ ರೈತರ ಮೇಲೆ ಏನು ಕೇಸ್ ಇದೆ, ಹಿಂದಿನ ಸರ್ಕಾರದವರು ಅವರನ್ನು ಅರೆಸ್ಟ್ ಮಾಡಿಸುತ್ತೇವೆ, ಇಲ್ಲಿಗೆ ತಂದು ಜೈಲಿಗೆ ಹಾಕುತ್ತೇವೆಂದು ಹೇಳಿದ್ದು, ಅದು ಕಡತದಲ್ಲಿದೆ, ಅದರ ಬಗ್ಗೆ ಏನಾದರೂ

ಮಾಡಿದ್ದೀರಾ? ಈ ಬಿಲ್ ಪ್ರಕಾರ ರೈತರಿಗೆ ಏನು ಗ್ಯಾರಂಟಿ ಕೊಡುತ್ತಿದ್ದೀರಿ, ಎಂಬ ಬಗ್ಗೆ ಏಸ್ಟ್ರುತವಾಗಿ ತಿಳಿಸಿ. ಕಾರ್ಮಿಕರು ಇವತ್ತು ಬೀದಿ ಪಾಲಾಗಿದ್ದಾರೆ. ಅವರ ಬಗ್ಗೆಯೂ ಯೋಚಿಸಬೇಕು.

ಶ್ರೀ ಹೆಚ್.ಎಂ.ಚಂದ್ರಶೇಖರಪ್ಪ(ಶಿವಮೊಗ್ಗ): ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಂಡಿಸಿರುವ ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳಬೇಕು, ದೇಪ ಸಕ್ಕರೆ ಕಾರ್ಖಾನೆಯನ್ನು ಸರ್ಕಾರ ತೆಗೆದುಕೊಳ್ಳಬೇಕು. ಈಗಾಗಲೇ ಷೇರು ಕಲೆಕ್ಟ್ ಮಾಡುವುದಕ್ಕೆ ಪ್ರಾರಂಭ ಮಾಡಲಾಗಿದೆ, ಅಲ್ಲಿಯ ಕೈಗಾರಿಕೋದ್ಯಮಿಗಳು ಸೇರಿಕೊಂಡು ಛೇಂಬರ್ಸ್ ಆಫ್ ಕಾಮರ್ಸ್‌ನಿಂದ ಮಂತ್ರಿಗಳ ಸಮ್ಮುಖದಲ್ಲಿ ಸಭೆಯನ್ನು ಸೇರಿ ಆದಷ್ಟು ಕಾರ್ಖಾನೆಯನ್ನು ಉಳಿಸಿಕೊಳ್ಳಬೇಕೆಂದು ನಿರ್ಧರಿಸಲಾಯಿತು. ಆ ಕಾರ್ಖಾನೆಯು 1997ರಿಂದಲೂ ಮುಚ್ಚಿದೆ, ಹಿಂದಿನ ಸರ್ಕಾರವೂ ಕೂಡ ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಲಿಲ್ಲ, ರೈತರಿಗೆ ಹಣವನ್ನು ಪಾವತಿ ಮಾಡಲಿಲ್ಲ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಅವರಿಗೆ ದೀಪವನ್ನಾದರೂ ಕೊಟ್ಟರು, ನಾವು ಬೆಳಕನ್ನು ಅವರಿಗೆ ಕೊಟ್ಟಿವು. ನಮ್ಮ ಕ್ಷೇತ್ರದಲ್ಲಿ ರೈತರ ಪರವಾಗಿ ನಾವು ಹೋರಾಡುತ್ತಿದ್ದೇವೆ. ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಮಂತ್ರಿಗಳನ್ನು ತಮ್ಮ ಮೂಲಕ ಕೇಳುತ್ತೇನೆ.

ತುಂಗಭದ್ರಾ ಸಕ್ಕರೆ(ದೇವಿ ಸಕ್ಕರೆ) ನಿಯಮಿತ

(ಉದ್ಯಮದ ಆರ್ಜನೆ ಮತ್ತು ವರ್ಗಾವಣೆ) (ನಿರಸನ) ವಿಧೇಯಕ 2001)

ಪರ್ಯಾಲೋಚನಾ ಪ್ರಸ್ತಾವ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, ''2001ನೇ ಸಾಲಿನ ತುಂಗಭದ್ರಾ ಸಕ್ಕರೆ (ದೇಪ ಸಕ್ಕರೆ) ನಿಯಮಿತ (ಉದ್ಯಮದ ಆರ್ಜನೆ ಮತ್ತು ವರ್ಗಾವಣೆ) (ನಿರಸನ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2

ಅಧ್ಯಕ್ಷರು: ''ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ''

(ಖಂಡ-2 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, ''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಆರ್.ವಿ.ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು): ''2001ನೇ ಸಾಲಿನ ತುಂಗಭದ್ರಾ ಸಕ್ಕರೆ (ದೇವಿ ಸಕ್ಕರೆ) ನಿಯಮಿತ (ಉದ್ಯಮದ ಆರ್ಜನೆ ಮತ್ತು ವರ್ಗಾವಣೆ) (ನಿರಸನ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, ''2001ನೇ ಸಾಲಿನ ತುಂಗಭದ್ರಾ ಸಕ್ಕರೆ (ದೇವಿ ಸಕ್ಕರೆ) ನಿಯಮಿತ (ಉದ್ಯಮದ ಆರ್ಜನೆ ಮತ್ತು ವರ್ಗಾವಣೆ) (ನಿರಸನ) ವಿಧೇಯಕವನ್ನು ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು: ಈಗ ಯೂನಿವರ್ಸಿಟಿ ಬಿಲ್ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಇದು ಏನಾಗಿದೆ ಎಂದರೆ ಕಳೆದ ವಾರದಿಂದ ನಾವು ನೀರಾ ಬಗ್ಗೆ ಹೇಳುತ್ತಿದ್ದೇವೆ. ಇವತ್ತು ಮೂರು ಬಿಲ್‌ಗಳು ಪಾಸ್ ಆದವು. ನಾವು ಸಹಕಾರ ಕೊಡುತ್ತಲೇ ಬಂದಿದ್ದೇವೆ. ಇಲ್ಲಿ ಸಾರ್ವಜನಿಕ ಮಹತ್ವದ ವಿಷಯದ ಬಗ್ಗೆ ಕೂಡ ನಾವು ಚರ್ಚೆ ಮಾಡಬೇಕಾಗುತ್ತದೆ. ಈ ನೀರಾ ಇಳಿಸುವ ಬಗ್ಗೆ ಸರ್ಕಾರದ ನೀತಿ ಏನು ಎಂಬುದನ್ನು ನಾವು ತಿಳಿಯಬೇಕಾಗುತ್ತದೆ....

ಅಧ್ಯಕ್ಷರು: ನಾಳೆ ಅದನ್ನು ಮೊದಲು ತೆಗೆದುಕೊಳ್ಳೋಣ. ಈಗ ಯಾರಾದರೂ ಒಬ್ಬರು ಬಿಲ್ ಬಗ್ಗೆ ಮಾತನಾಡಲು ಪ್ರಾರಂಭ ಮಾಡಿ.